**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ.**

ಸಿ.ಡ 7 ಪಿ.ಡ
ಬ್ಲ್ಯೂಯ. ಬ್ಲ್ಯೂಯ.5

ಸಿ.ಸಿ. ನಂ. 155/2020

| | |
|---|---|
| ಹೆಸರು | ಃ ರಾಜಕುಮಾರ |
| ತಂದೆ ಹೆಸರು | ಃ ದಶರಥ ಜಾಮಗೊಂಡ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಪಿಎಸ್ಐ GESCOM, ಕಲಬುರಗಿ |
| ವಾಸ | ಃ ಕಲಬುರಗಿ. |

ದಿನಾಂಕಃ 04-03-2025
ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.
**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು ದಿಃ 04-03-2019 ರಿಂದ ದಿಃ 15-10-2020 ರವರೆಗೆ ಭೀಮರಾಯನಗುಡಿ ಪೊಲೀಸ್ ಠಾಣೆಯಲ್ಲಿ ಪಿಎಸಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕ 15.08.2020 ರಂದು ಸಾ. 05. 00 ಗಂಟೆ ಸುಮಾರಿಗೆ ನಾನು ಮತ್ತು ನಮ್ಮ ಸಿಬ್ಬಂದಿಯವರಾದ ಚಾಸಾ8 ರಿಂದ 10 ರವರು ಠಾಣೆಯಟಲ್ಲಿದ್ದಾಗ ಚಾಸಾ1 ರಿಂದ 3 ಠಾಣೆಗೆ ಹಾಜರಾಗಿ ನಮಗೆ ತಿಳಿಸಿದ್ದೇನೆಂದರೆ ಮೂಡಬೂಳ ಗ್ರಾಮದಿಂದ ಇಟಗಾ ಎಸ್. ಗ್ರಾಮದ ಕಡೆಗೆ ಲಾರಿ ನಂ. ಎಂಹೆಚ್.-13/ಆರ್.-3613 ನೇದ್ದರಲ್ಲಿ ಅಕ್ರಮವಾಗಿ ರಸಗೊಬ್ಬರ ಸಾಟಾರ ಮಾಡಲಾಗುತ್ತಿದೇ ಎಂದು ಹೇಳಿದ ಮೇರೆಗೆ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ 8 ರಿಂದ 10 ರವರು ಒಂದು ಖಾಸಗಿ ವಾಹನದಲ್ಲಿ ಮತ್ತು ಚಾಸಾ1 ರಿಂದ 3 ಒಂದು ಖಾಸಗಿ ವಾನಹದಲ್ಲಿ ಶಹಾಪೂರ- ಜೇವರ್ಗಿ

ರಾ.ಹೆದ್ದಾರಿ ರಸ್ತೆಯ ಮೇಲೆ  ಕೊಡಮನಳ್ಳಿ ಕ್ರಾಸ್ ಹಹತ್ತಿರ ನಿಂತೇವು. ಆಗ ಸಮಯ ಸಾಯಂಕಾಲ 5.40 ಗಂಟೆ ಆಗಿತ್ತು.

3. ನಂತರ ಮೂಡಮಳ ಕಡೆಯಿಂದ ಲಾರಿ ನಂ. ಎಂಹೆಚ್.-13/ಆರ್.3613 ನೇದ್ದು ಬಂದಾಗ ಅದನ್ನು ತಡೆದು ನಿಲ್ಲಿಸಿ ಚಾಸಾ1 ರವರುಲಾರಿಯ ಚಾಲಕನಿಗೆ ವಿಚಾರಿಸಿ, ಲಾರಿಯನ್ನು  ಲಾರಿಯನ್ನು ಪರಿಶೀಲಿಸಿದಾಗ, ಅದರಲ್ಲಿ ಮಂಗಳ ಡಿ.ಎ.ಪಿ. ಜೈ ಕಿಸಾನ್ ಎಂದು ಬರೆದಿರುವ ಗೊಬ್ಬರದ ಚೀಲಗಳು ಇದ್ದವು.  ಕೃಷಿ ಅಧಿಕಾರಿಗಳು ಸದರಿ ಗೊಬ್ಬರದ  ಸಾಗಾಟ ಮಾಡಲು ದಾಖಲೆಗಳು ಇದೆಯಾ ಎಂದು ಕೇಳಿದಾಗ, ಚಾಲಕನು ತನ್ನ ಬಳಿ ದಾಖಲೆ ಇರುವುದಿಲ್ಲ ಎಂದು ಹೇಳಿದನು.  ನಂತರ  ಆ ಚಾಲಕನ ಹೆಸರು ಮತ್ತು ವಿಳಾಸ ಕೇಳಿದಾಗ ಆತನು ತನ್ನ ಹೆಸರು ಅಂಬರೇಶ್ ನಾಟೇಕಾರ್  ಸಾಃ ಮೂಡಬೂಳ ಎಂದು ತಿಳಿಸಿದನು.  ಸದರಿ ಗೊಬ್ಬರದ ಬಗ್ಗೆ ವಿಚಾರಿಸಿದಾಗ, ಆತನು ಮೂಡಬುಳ ಗ್ರಾಮದ ಮಲ್ಲಿನಾಥ ದ್ಯಾಮಗೊಂಡ ಇತನ ಗೊದಾಮುನಿಂದ ಗುರು ದೇಸಾಯಿ ಸಾಃ ಹಾಲಿ ವಸತಿ ಶಹಾಪೂರ, ಹಣಮಂತ್ರಾಯ ಮೇಟಿ ಸಾಃ ನಾಗನಟಗಿ ಹಾಗೂ ಸುಜಾತಾ  ಹಡಪದ ಸಾಃ ಭೀ ಗುಡಿ ಇವರು ಸದರಿ ಗೊಬ್ಬರವನ್ನು ಲೋಡ್ ಮಾಡಿಸಿ ಮೂಡಬೂಳದಿಂದ ಇಟಗಾ ಎಸ್. ಗ್ರಾಮಕ್ಕೆ ಸಾಗಾಟ ಮಾಡುವಂತೆ ಹೇಳಿದ ಮೇರೆಗೆ, ಅದನ್ನು ತಾನು ಸಾಗಾಟ ಮಾಡುತ್ತಿರುವುದಾಗಿ ಹೇಳಿದನು.

4. ನಂತರ ಪಂಚರ ಸಮಕ್ಷಮ ಕೃಷಿ ಅಧಿಕಾರಿಗಳು ಸದರಿ ಗೊಬ್ಬರವನ್ನು ಪರಿಶೀಲಿಸಿದಾಗ ಲಾರಿಯಲ್ಲಿದ್ದ 50 ಕೆ.ಜಿ. ತೂಕದ 298 ಚೀಲಗಳನ್ನು ಇರುವುದು ಕಂಡು ಬಂತು. ಪ್ರತಿ ಚೀಲದ ಬೆಲೆ ಅದರ ಬೆಲೆ ರೂ.1255/- ಎಂದು ಬರೆಯಲಾಗಿತ್ತು. ನಂತರ ಶ್ಯಾಂಪಲ್ ಗಾಗಿ ನಾಲ್ಕು ಚೀಲಗಳನ್ನು ಪ್ರತ್ಯೇಕವಾಗಿ ತೆಗೆಯಲಾಗಿದೆ. ಉಳಿದ 294 ಚೀಲಗಳನ್ನು ಹಾಗೂ ಲಾರಿಯನ್ನು ಜಪ್ತಿಪಡಿಸಿಕೊಡಿರುತ್ತಾರೆ. ಆ ಬಗ್ಗೆ ಸಾ.05.40 ರಿಂದ 06.40 ಗಂಟೆಯವರೆಗೆ ಜಪ್ತಿ ಪಂಚನಾಮೆಯನ್ನು ಮಾಡಲಾಗಿರುತ್ತದೆ.  ನಂತರ ಜಪ್ತಿಪಡಿಸಿಕೊಂಡ ಲಾರಿ, ಮತ್ತು  ಗೊಬ್ಬರ ಮತ್ತು ಆರೋಪಿತನೊಂದಿಗೆ ಪೊಲೀಸ್ ಠಾಣೆಗೆ ಬಂದಾಗ, ಚಾಸಾ1 ರವರು ಆ ಬಗ್ಗೆ ದೂರನ್ನು ಸಲ್ಲಿಸಿರುತ್ತಾರೆ.

5. ಆ ದಿನ ನಮ್ಮ ಜೊತೆಯಲ್ಲಿ ಚಾ.ಸಾ.6 ರವರೂ ಸಹ ಹಾಜರಿದ್ದರು. ದಿನಾಂಕ 16.08.2020 ರಂದು ಈ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಮತ್ತು ದಿನಾಂಕ 17.08.2020 ರಂದು

ಮರು ಹೇಳಿಕೆಯನ್ನು ನೀಡಿರುತ್ತೇನೆ. ಪಂಚನಾಮೆ ಕಾಲಕ್ಕೆ ಕೃಷಿ ಅಧಿಕಾರಿಗಳು 4 ಚೀಲವನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಸೀಲ್ ಮಾಡಿರುತ್ತಾರೆ. ಇಂದು ಮಾನ್ಯ ನ್ಯಾಯಾಲಯದ ಮುಂದೆ ಇರುವ 4 ಜನ ಆರೋಪಿತರನ್ನು ಸಾಕ್ಷಿ ಒಬ್ಬ ಆರೋಪಿತನನ್ನು ನೋಡಿ ಗುರುತಿಸಿದ್ದು ಆತನ ಹೆಸರು ಗುರು ಎಂದು ಇರುತ್ತದೆ. ಸಾಕ್ಷಿ ಪುನಹ ಹೇಳುತ್ತಾರೆ ಇನ್ನೊಬ್ಬ ಆರೋಪಿತನನ್ನು ನೋಡಿ ಗುರುತಿಸಿದ್ದು ಆತನ ಹೆಸರು ಅಮರೇಶ ಎಂದು ಇರುತ್ತದೆ. ಸದರಿ ಲಾರಿಯ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.3 ಮತ್ತು4 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲುಃ 1 ನೇ ಆರೋಪಿ ಪರಃ ಶ್ರೀ ಎ.ಎಸ್.ಡಿ. ವಕೀಲರಿಂದಃ**

**6.** ಸದರಿ ಚೀಲಗಳು plastic ಚೀಲಗಳಾಗಿದ್ದವು. ಆ ದಿನ ಲಾರಿಯ ಚಾಲಕ 4 ನೇ ಆರೋಪಿ ನಮ್ಮ ಮುಂದೆ 1 ನೇ ಆರೋಪಿತನ ಹೆಸರನ್ನು ಹೇಳಿದ್ದನು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಇಂದು ಮಾನ್ಯ ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿ. ನಾನು, ಕೃಷಿ ಅಧಿಕಾರಿಗಳು ಮತ್ತು ಅವರ ಸಿಬ್ಬಂದಿ ಮತ್ತು ನಮ್ಮ ಸಿಬ್ಬಂದಿ ಸೇರಿ ಕೊಡಮನಳ್ಳಿ ಕ್ರಾಸ್ ಹತ್ತಿರ ನಿಂತಿದ್ದಾಗ 4 ನೇ ಆರೋಪಿತ ಲಾರಿಯಲ್ಲಿ ನಕಲಿ ಗೊಬ್ಬರ ಸಾಗಾಟ ಮಾಡುತ್ತಿದ್ದಾಗ ಸದರಿ ಲಾರಿಯನ್ನು ತಡೆದು ಪರಿಶೀಲಿಸಿದಾಗ ಅದನ್ನು ಜಪ್ತಿಪಸಿಡಿಕೂಂಡಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಜಪ್ತಿಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 2 ನೇ ಆರೋಪಿ ಪರಃ ಶ್ರೀ ಟಿ.ಎನ್. ವಕೀಲರಿಂದಃ**

7. ಚಾಸಾ1 ರವರುತ ಮ್ಮ ಜೊತೆಯಲ್ಲಿ ಪಂಚರನ್ನೂ ಸಹ ಕರೆದುಕೂಂಡು ಠಾಣೆಗೆ ಬಂದಿದ್ದರು. ನಾವು ಆ ದಿನ ಬಳಸಿದ ಖಾಸಗಿ ವಾಹನ ಬುಲೆರೋ ಜೀಪ್ ಆಗಿತ್ತು. ಸದರಿ ವಾಹನ ಚಾಲಕನ ಮತ್ತು ಮಾಲಿಕನ ಹೆಸರು ನನಗೆ ಗೊತ್ತಿಲ್ಲ. ಸದರಿ ವಾಹನವನ್ನು ಚಾಸಾ9 ರವರು ತೆಗೆದುಕೊಂಡು ಬಂದಿದ್ದರು. ಸದರಿ ಮೂಡಬುಳದಿಂದ ಇಟಗಾ ಎಸ್ ಗ್ರಾಮಕ್ಕೆ ಅಂದಾಜು 5 ಕಿ.ಮೀ. ದೂರದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ದಾಳಿ ಮಾಡುವ ಕಾಲಕ್ಕೆ ಮಲ್ಲಿನಾಥ ದ್ಯಾಮಗೊಂಡ ಇವರ ಗೋದಾಮುವಿಗೆ ಭೇಟಿ ನೀಡಿರಲಿಲ್ಲ. ಈ ಪ್ರಕರಣ ದಾಖಲಿಸುವ ಮುಂಚೆ ನಮ್ಮ ಠಾಣಾ ವ್ಯಾಪ್ತಿಯಲ್ಲಿ ನಕಲಿ ಗೊಬ್ಬರ

ಮಾರಾಟ ಮಾಡಿ ಜನರಿಗೆ ಮೋಸ ಮಾಡಿದ್ದಾರೆ ಎಂದು ಸಾರ್ವಜನಿಕರಿಂದಾಗಲೀ ಅಥವಾ ಕೃಷಿ ಅಧಿಕಾರಿಯಾಗಲೀ ದೂರು ಸಲ್ಲಿಸಿರುವುದಿಲ್ಲ. ದಿಃ 16-08-2020 ರಂದು ಹಾಗೂ ದಿಃ 17-08-2020 ರಂದು ಸಾರ್ವಜನಿಕರು ನಕಲಿ ಗೊಬ್ಬರ ಮಾರಾಟದಿಂದ ತಮಗೆ ಮೋಸವಾಗುತ್ತಿದೆ ಎಂದು ಹೇಳಿ ದೂರು ಸಲ್ಲಿಸಿರುವುದಿಲ್ಲ. ನಾನು ಮರು ಹೇಳಿಕೆ ನೀಡುವ ಕಾಲಕ್ಕೆ ಸದರಿ ಗೊಬ್ಬರ ನಕಲಿ ಗೊಬ್ಬರ ಇದೆ ಎಂದು ಕೃಷಿ ಅಧಿಕಾರಿಗಳ ಹೇಳಿಕೆಯನ್ನು ಆಧರಿಸಿ ಹೇಳಿರುತ್ತೇನೆ. ಚಾಸಾ1 ರವರು ಸದರಿ ಗೊಬ್ಬರ ನಕಲಿ ಗೊಬ್ಬರ ಇಂದೆ ಎಂದು ತಿಳಿಸಿದರು. ಚಾಸಾ1 ರವರು ಆ ಗೊಬ್ಬರಗಳ ಚೀಲ original brand ದಾಗಿರುತ್ತದೆ ಆದರೆ ಗೊಬ್ಬರ ಮಾತ್ರ ನಕಲಿ ಇರುತ್ತದೆ ಎಂದು ಹೇಳಿದರು. ಸದರಿ ಗೊಬ್ಬರದ ಚೀಲಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಆದರೆ ಆ ಚೀಲಗಳ ಬಗ್ಗೆ ಚಾಸಾ1 ರವರು ಮಾಹಿತಿ ನೀಡಿದರು. 1 ರಿಂದ 3 ನೇ ಆರೋಪಿತರು ಮತ್ತು ಮಲ್ಲಿನಾಥ ದ್ಯಾಮಗೊಂಡ ಇವರ ಮದ್ಯೆ ನಡೆದ ವ್ಯವಹಾರದ ಬಗ್ಗೆ ನನಗೆ ಭಾತ್ಮಿದಾರರಿಂದ ನನಗೆ ಗೊತ್ತಾಗಿರುತ್ತದೆ. ಸದರಿ ಗೊಬ್ಬರ ನಕಲಿ ಎಂದು ಹೇಳಲು ನನ್ನ ಬಳಿ ಯಾವುದೇ ಆಧಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ1 ರವರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣದ ದಾಖಲಪಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ, ಈ ಪ್ರಕರಣಕ್ಕೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರಃ**

8. 3 ಮತ್ತು 4 ನೇ ಆರೋಪಿತರ ಪರ ವಕೀಲರು 2 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಶಹಾಪೂರ.